Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 49/2026

ಸಿ ಡಬ್ಲ್ಯೂ- 06
ಪಿ ಡಬ್ಲ್ಯೂ- 04

| | |
|---|---|
| ಸಾಕ್ಷಿದಾರರ ಹೆಸರು | ಃ- ದೇವಪ್ಪ |
| ತಂದೆಯ ಹೆಸರು | ಃ- ಮಾನಪ್ಪ |
| ವಯಸ್ಸು | ಃ- 40 ವರ್ಷ |
| ಉದ್ಯೋಗ | ಃ- ಒಕ್ಕಲುತನ |
| ವಾಸಸ್ಥಳ | ಃ- ದೇವರಭೂಪೂರ |

**ದಿ.10-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.***

ಚಾ.ಸಾ-4 ಮತ್ತು 7 ರವರ ಪರಿಚಯ ಇದೆ. ಸುಮಾರು 9 ತಿಂಗಳ ಹಿಂದೆ ಪೋಲಿಸರು ಎರಡು ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ವಾಹನಗಳನ್ನು ಜಪ್ತಿ ಪಡಿಸಿಕೊಂಡಿಲ್ಲ. ಪಂಚನಾಮೆಯನ್ನು ಈಗಾಗಲೇ ನಿ.ಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-2(ಬಿ) ಎಂದು, ಪೋಟೋವನ್ನು ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಗಿದೆ. ವಾಹನ ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿ.ಪಿ-4 ಎಂದು ಗುರುತಿಸಲಾಗಿದ್ದು, ಆಕ್ಷಿಯ ಸಹಿಯನ್ನು ನಿ.ಪಿ-4(ಬಿ) ಎಂದು ಗುರುತಿಸಲಾಯಿತು. ಪೋಟೊಗಳನ್ನು ಈಗಾಗಲೇ ನಿ.ಪಿ-5 ಮತ್ತು 6 ಎಂದು ಗುರುತಿಸಲಾಗಿದೆ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ.**

ದಿನಾಂಕ 06-06-2025 ರಂದು ಚಾ.ಸಾ-4 ರವರು ತೋರಿಸಿದ ಮೇರೆಗೆ ಮದ್ಯಾಹ್ನ 12-30 ರಿಂದ 1-30 ವರೆಗೆ ಅಪಘಾತವಾದ ಸ್ಥಳದಲ್ಲಿ ನನ್ನ ಮತ್ತು ಚಾ.ಸಾ-7 ರವರ ಸಮಕ್ಷಮ ನಿ.ಪಿ-2 ರಂತೆ ಪಂಚನಾಮೆ ಮಾಡಿ ಕಚ್ಚಾ ನಕಾಶೆ ತಯಾರಿಸಿ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಮದ್ಯಾಹ್ನ 2-15 ರಿಂದ 3-20 ವರೆಗೆ ಲಿಂಗಸುಗೂರು ಪೋಲಿಸ್ ಠಾಣೆಯ ಆವರಣದಲ್ಲಿ ನನ್ನ ಮತ್ತು ಚಾ.ಸಾ-7 ರವರ ಸಮಕ್ಷಮ ನಿ.ಪಿ-4 ರಂತೆ

ಜಪ್ತಿ ಪಂಚನಾಮೆ ಮಾಡಿ ಕೆಎ-01, ಎಮ್.ಜಿ-4619 ನ್ನು ಜಪ್ತಿಪಡಿಸಿಕೊಂಡು ಫೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿ.ಪಿ-2 ರಿಂದ 7 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿಯನ್ನು ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಎಸ್.ಎಸ್.ಎಸ್ ವಕೀಲರಿಂದ</u>** : -

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.